**ಕರ್ನಾಟಕ ಸರ್ಕಾರ**
**Government of Karnataka**

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)ರವರ ಕಛೇರಿ
Office of the
Principal Chief Conservator of Forests
(Head of Forest Force)

ಅರಣ್ಯ ಭವನ, 18ನೇ ಅಡ್ಡ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-03
Aranya Bhavan, 18th Cross,
Malleshwaram, Bengaluru-03
Telephone: 080 2336 7123
Email: pccfcash@gmail.com

**No.** KFD/HOFF/B9(MSC)/1/2020-PnR-KFD **E- 249302**
ದಿನಾಂಕ:02.05.2025

## (ಪೂರಕ) ಅಧಿಸೂಚನೆ

ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ (ಅರಣ್ಯ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಗಳ ವರ್ಗಾವಣೆ ಮತ್ತು ಸ್ಥಳನಿಯುಕ್ತಿಗಳ ನಿಯಂತ್ರಣ) ಅಧಿನಿಯಮ, 2016 ಹಾಗೂ ನಿಯಮಾವಳಿ, 2019ನ್ನು ಅನುಷ್ಠಾನಗೊಳಿಸುವ ಕುರಿತಂತೆ, 2025-26ನೇ ಸಾಲಿನ ಸಾಮಾನ್ಯ (General) ವರ್ಗಾವಣೆ/ಸ್ಥಳನಿಯುಕ್ತಿ (Transfers/Postings)ಗಾಗಿ ಈಗಾಗಲೇ ಜಾರಿಗೊಳಿಸಿರುವ ಅಪೆಕ್ಸ್ ಪ್ರಾಧಿಕಾರದ ಅಧಿಸೂಚನೆ ಸಂಖ್ಯೆ: KFD/HOFF/B9(MSC)/1/2020-PnR-KFD [E-249302], ದಿನಾಂಕ:28.03.2025ರಂತೆ ಹಾಗೂ ದಿನಾಂಕ: 24.04.2025ರಂದು ನಡೆದ ಅಪೆಕ್ಸ್ ಪ್ರಾಧಿಕಾರದ ಸಭೆಯ ತೀರ್ಮಾನದಂತೆ ನಿಯಮ 9(6) ರನ್ವಯ ಸಮಾಲೋಚನೆ ದಿನಾಂಕ, ಸಮಯ, ಸ್ಥಳವನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.

| | |
|---|---|
| ಸಮಾಲೋಚನೆ ಸ್ಥಳ | • **ರಾಜ್ಯ ಪ್ರಾಧಿಕಾರ (SA):** ಸಭಾಂಗಣ, 8ನೇ ಮಹಡಿ, ಅರಣ್ಯ ಭವನ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.<br>• **ವೃತ್ತ ಪ್ರಾಧಿಕಾರಗಳು (CA):** ಸಂಬಂಧಿಸಿದ ವೃತ್ತ ಕೇಂದ್ರ ಸ್ಥಾನ.<br>• **ವಿಭಾಗೀಯ ಪ್ರಾಧಿಕಾರಗಳು (DA):** ಸಂಬಂಧಿಸಿದ ವೃತ್ತ ಕೇಂದ್ರ ಸ್ಥಾನ. |
| ಸಮಾಲೋಚನೆ ದಿನಾಂಕ ಮತ್ತು ಸಮಯ | • **ನಿಯಮಿತ ಸಿಬ್ಬಂದಿಗಳ ಸಮಾಲೋಚನೆ: -**<br>○ **ರಾಜ್ಯ ಪ್ರಾಧಿಕಾರ (SA):** 05.05.2025 (ಸೋಮವಾರ) ರಿಂದ<br>○ **ವೃತ್ತ ಪ್ರಾಧಿಕಾರಗಳು (CA):** 12.05.2025 (ಸೋಮವಾರ) ರಿಂದ ಪ್ರಾರಂಭ<br>○ ನಂತರ **ವಿಭಾಗೀಯ ಪ್ರಾಧಿಕಾರಗಳು** (DA) ಹಾಗೂ ತದನಂತರ ಅಂತಿಮ ಹಂತ - **Mop up round (Stage-I)**.<br>• **ಸಮಾಲೋಚನೆಯಲ್ಲಿ ವಿಸ್ಥಾಪಿತ (displaced) ಕೆ.ಸಿ.ಎಸ್.ಆರ್. ನಿಯಮ 32ರಲ್ಲಿ ಸ್ವತಂತ್ರ ಪ್ರಭಾರದಲ್ಲಿ ಇರುವ ಸಿಬ್ಬಂದಿಗಳಿಗೆ** ಅಂತಿಮ ಹಂತ - **Mop up round (Stage-II): -**<br>○ **ಲೀನ್ ಹುದ್ದೆಗೆ ಸ್ಥಳನಿಯುಕ್ತಿಗಾಗಿ ಒಪ್ಪಿಗೆ/ಅರ್ಜಿಗಳನ್ನು ಸ್ವೀಕರಿಸುವುದು** *(ಯಾವುದಾದರೂ ಇದ್ದಲ್ಲಿ)*: 19.05.2025 (ಸೋಮವಾರ) ರಿಂದ 21.05.2025 (ಬುಧವಾರ)ದವರೆಗೆ.<br>○ **ಅರ್ಜಿಗಳ ಮುಂದಿನ ಹಂತ (Processing of Applications):** 22.05.2025 (ಗುರವಾರ) ಮತ್ತು 23.05.2025ದಿಂದ<br>○ **ವೃತ್ತ ಪ್ರಾಧಿಕಾರಗಳ (CA) ಸಮಾಲೋಚನೆ** *(ಯಾವುದಾದರೂ ಇದ್ದಲ್ಲಿ)*: 26.05.2025 (ಸೋಮವಾರ) ದಿಂದ ಮುಗಿಯುವವರೆಗೆ.<br>**ಸಮಯ:** ಪ್ರತಿ ದಿನ ಬೆಳಿಗ್ಗೆ 10.00 ಗಂಟೆಯಿಂದ |

**ವಿಶೇಷ ಸೂಚನೆ:**

1. ಎಲ್ಲಾ ಪ್ರಾಧಿಕಾರಗಳು ಸಮಾಲೋಚನಾ ಪ್ರಕ್ರಿಯೆಯನ್ನು ಕೈಗೊಳ್ಳಲು ಅನುವಾಗುವಂತೆ ಪೂರ್ವಭಾವಿ ತಾಂತ್ರಿಕ ಹಾಗೂ ಇತರೆ ವ್ಯವಸ್ಥೆಗಳನ್ನು ಸಮಾಲೋಚನೆಯ ಹಿಂದಿನ ದಿನವೇ ಮಾಡಿಕೊಳ್ಳತಕ್ಕದ್ದು.
2. ಸಮಾಲೋಚನೆಗೆ ಒಳಪಟ್ಟಿರುವ ಎಲ್ಲಾ ಪ್ರಾಧಿಕಾರಗಳು ಹಾಗೂ ಸಮಾಲೋಚನೆ ಕಾರ್ಯಕ್ಕೆ ನಿಯೋಜಿಸಿರುವ ಸಿಬ್ಬಂದಿಗಳು ಸಮಾಲೋಚನೆಯ ಸಮಯದಲ್ಲಿ ಕಡ್ಡಾಯವಾಗಿ ಹಾಜರಿರುವುದು.
3. ಎಲ್ಲಾ ವೃತ್ತ ಪ್ರಾಧಿಕಾರಗಳು ಆಯಾ ವೃತ್ತ ವ್ಯಾಪ್ತಿಗಳಲ್ಲಿ ಗಣಕಯಂತ್ರ ಬಳಕೆಯಲ್ಲಿ ಪರಿಣತಿ ಹೊಂದಿದ ಅವಶ್ಯವಿರುವಷ್ಟು ಕಾರ್ಯಕಾರಿ/ಲಿಪಿಕ ಸಿಬ್ಬಂದಿಗಳನ್ನು ಸಮಾಲೋಚನಾ ಕಾರ್ಯಕ್ಕೆ ನಿಯೋಜಿಸಿಕೊಳ್ಳತಕ್ಕದ್ದು.
4. ಸಮಾಲೋಚನಾ ಪ್ರಾಧಿಕಾರವಾರು ಮತ್ತು ವೃಂದವಾರು ಆದ್ಯತಾ ಪಟ್ಟಿಗಳ *(ಸಮಾಲೋಚನೆ ಆದ್ಯತೆ ಕ್ರಮ)* ಹಾಗೂ ಭರ್ತಿ ಮಾಡಬೇಕಾದ ಹುದ್ದೆಗಳ ಪರಿಷ್ಕೃತ (updated) ಮಾಹಿತಿಯನ್ನು ಅರಣ್ಯ ಇಲಾಖೆಯ ಜಾಲತಾಣದಲ್ಲಿ ನಿಯಮಿತವಾಗಿ ಪ್ರಕಟಿಸಲಾಗುವುದು.
5. ಸಮಾಲೋಚನೆಗೆ ಒಳಪಡುವ ಸಿಬ್ಬಂದಿಗಳು ವೃಂದವಾರು, ಪ್ರಾಧಿಕಾರವಾರು ಹಾಗೂ ದಿನಾಂಕವಾರು ವಿವರಗಳನ್ನು ಪ್ರತಿ ದಿನ ಅರಣ್ಯ ಇಲಾಖೆಯ ಜಾಲತಾಣದಿಂದ ಖಚಿತಪಡಿಸಿಕೊಳ್ಳುವುದು. ಈ ಕುರಿತು ಯಾವುದೇ ರೀತಿಯ ಪ್ರತ್ಯೇಕವಾದ ಪತ್ರ ವ್ಯವಹಾರವನ್ನು ಮಾಡಲಾಗುವುದಿಲ್ಲ.

Digitally signed by
Meenakshi Negi
Date: 02-05-2025
16:01:50

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯಪಡೆ ಮುಖ್ಯಸ್ಥರು) ಹಾಗೂ
**ಅಧ್ಯಕ್ಷರು**, ಅಪೆಕ್ಸ್ ಪ್ರಾಧಿಕಾರ

**ಪ್ರತಿ ಮಾಹಿತಿಗಾಗಿ/ಹಾಗೂ ಆಯಾ ಆಡಳಿತ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಬಂಧಿಸಿದ ಸಮಾಲೋಚನೆಗೆ ಒಳಪಟ್ಟಿರುವ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರು/ ಅರಣ್ಯ ರಕ್ಷಕರು** *(ಪ್ರಸ್ತುತ ಗಸ್ತು ಅರಣ್ಯ ಪಾಲಕರು)***/ ಅರಣ್ಯ ವೀಕ್ಷಕರ ಗಮನಕ್ಕೆ ತರಲು ಮತ್ತು ಎಲ್ಲಾ ಅರಣ್ಯ ಕಛೇರಿಗಳ ಸೂಚನಾ ಫಲಕದಲ್ಲಿ ಪ್ರದರ್ಶಿಸಲು:-**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು) ಹಾಗೂ **ಅಧ್ಯಕ್ಷರು**, **ಅಪೆಕ್ಸ್ ಪ್ರಾಧಿಕಾರ** ರವರ ಆಪ್ತ ಸಹಾಯಕರು, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು- **ಸದಸ್ಯರು, ಅಪೆಕ್ಸ್ ಪ್ರಾಧಿಕಾರ.**
4. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (EWPRT & CC), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು- **ಸದಸ್ಯರು, ಅಪೆಕ್ಸ್ ಪ್ರಾಧಿಕಾರ.**

5. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಬ್ಬಂದಿ ಮತ್ತು ನೇಮಕಾತಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು- **ಅಧ್ಯಕ್ಷರು, ರಾಜ್ಯ ಪ್ರಾಧಿಕಾರ**.
6. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಆಡಳಿತ ಮತ್ತು ಸಮನ್ವಯ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು- **ಸದಸ್ಯರು, ರಾಜ್ಯ ಪ್ರಾಧಿಕಾರ**.
7. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು- **ಸದಸ್ಯರು, ರಾಜ್ಯ ಪ್ರಾಧಿಕಾರ**.
8. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮಾಹಿತಿ ಸಂವಹನ ತಂತ್ರಜ್ಞಾನ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು - **ಈ ಪೂರಕ ಅಧಿಸೂಚನೆಯನ್ನು ಇಲಾಖೆಯ ಜಾಲತಾಣದಲ್ಲಿ ಕೂಡಲೇ ಪ್ರಕಟಿಸಲು ಹಾಗೂ ಈ ಮೇಲಿನಂತೆ ಸಮಾಲೋಚನೆ ಪ್ರಕ್ರಿಯೆಗೆ ಸೂಕ್ತ ತಾಂತ್ರಿಕ ಸಿಬ್ಬಂದಿಗಳ/ಉಪಕರಣಗಳ ವ್ಯವಸ್ಥೆಗಾಗಿ.**
9. ಎಲ್ಲಾ ವೃತ್ತ ಪ್ರಾಧಿಕಾರಗಳು – **ಇಲಾಖೆಯ ಜಾಲತಾಣದಲ್ಲಿ ಪ್ರಕಟಣೆ ಮುಖಾಂತರ.** ಪ್ರ.ಮು.ಅ.ಸಂ. (ಅ.ಪ.ಮು)ರವರ ಪತ್ರ ಸಂಖ್ಯೆ: KFD/HOFF/B3(EST)/12/2023-PnR-KFD, E-1008371, ದಿನಾಂಕ:02.05.2025ರಲ್ಲಿ ಈಗಾಗಲೇ ನಿರ್ದೇಶಿಸಿರುವಂತೆ **ವೃತ್ತ ಪ್ರಾಧಿಕಾರದ ಅಧ್ಯಕ್ಷರುಗಳು ಎಲ್ಲಾ ಸದಸ್ಯರಿಗೆ ವೃತ್ತ ಪ್ರಾಧಿಕಾರದ ಸಮಾಲೋಚನೆ ಸಮಯದಲ್ಲಿ ಕಡ್ಡಾಯವಾಗಿ ಹಾಜರಾಗಲು ಲಿಖಿತವಾಗಿ ಸೂಚಿಸಲು.**
10. ಎಲ್ಲಾ ವಿಭಾಗೀಯ ಪ್ರಾಧಿಕಾರಗಳು – **ಇಲಾಖೆಯ ಜಾಲತಾಣದಲ್ಲಿ ಪ್ರಕಟಣೆಯ ಮುಖಾಂತರ.** ಪ್ರ.ಮು.ಅ.ಸಂ. (ಅ.ಪ.ಮು)ರವರ ಪತ್ರ ಸಂಖ್ಯೆ: KFD/HOFF/B3(EST)/12/2023-PnR-KFD, E-1008371, ದಿನಾಂಕ:02.05.2025ರಲ್ಲಿ ಈಗಾಗಲೇ ನಿರ್ದೇಶಿಸಿರುವಂತೆ ವಿಭಾಗೀಯ ಪ್ರಾಧಿಕಾರದ **ಅಧ್ಯಕ್ಷರುಗಳು ಎಲ್ಲಾ ಸದಸ್ಯರಿಗೆ ವಿಭಾಗೀಯ ಪ್ರಾಧಿಕಾರದ ಸಮಾಲೋಚನೆ ಸಮಯದಲ್ಲಿ ಕಡ್ಡಾಯವಾಗಿ ಹಾಜರಾಗಲು ಲಿಖಿತವಾಗಿ ಸೂಚಿಸಲು.**
11. ಸಂಬಂಧಿಸಿದ ಎಲ್ಲಾ ಉಪ ವಲಯ ಅರಣ್ಯಾಧಿಕಾರಿ-ಕಂ-ಮೋಜಣಿದಾರರು/ ಅರಣ್ಯ ರಕ್ಷಕರು (ಪ್ರಸ್ತುತ ಗಸ್ತು ಅರಣ್ಯ ಪಾಲಕರು)/ ಅರಣ್ಯ ವೀಕ್ಷಕರು - **ಇಲಾಖೆಯ ಜಾಲತಾಣದಲ್ಲಿ ಪ್ರಕಟಣೆಯ ಮುಖಾಂತರ.**
12. ವಲಯ ಅರಣ್ಯಾಧಿಕಾರಿ ಹಾಗೂ ಕ್ಷೇತ್ರಾಧಿಕಾರಿಗಳು, ಅರಣ್ಯ ಭವನ, ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
13. ಈ ಕಚೇರಿಯ ಬಿ3 ಮತ್ತು ಬಿ9 ಶಾಖೆಗಳಿಗೆ.